


# MASTER PLAN -2031 FOR ANEKAL LOCAL PLANNING AREA

## KEY MAP




## INDEX

- L.P.A. Boundary
- Municipal Boundary
- Village Boundary
- Survey No Boundary
- Conurbation Boundary
- Built-Up
- Settlement Boundary
- Electric power lines

**Annotation**

- State/National Highway — SH/NH
- Railway Station — Anekal
- Village Name — Anekal
- Survey No — 20
- Localities — Temple

- National Highway
- State Highway
- Major District Road
- Village/Other Road
- Railway Line
- Railway Station
- Proposed Railway Station

**Proposed Roads**

- Road to be Created
- Road to be Widened
- STRR
- TRR
- IRR
- RR

## Proposed Landuse Analysis - Anekal Planning District

| Symbol | LANDUSE | AREA (IN HECTARES) | PERCENTAGE |
|---|---|---|---|
| | RESIDENTIAL | 2984.03 | 43.11% |
| | COMMERCIAL | 217.65 | 3.14% |
| | INDUSTRIAL | 1192.04 | 17.22% |
| | PUBLIC & SEMI PUBLIC | 493.78 | 7.13% |
| | PARK & OPEN SPACE | 759.60 | 10.97% |
| | PUBLIC UTILITY | 2.68 | 0.04% |
| | TRANSPORTATION | 1272.02 | 18.38% |
| | **TOTAL** | **6921.79** | **100.00%** |
| | AGRICULTURE | 86.41 | |
| | WATER BODIES | 527.32 | |
| | FOREST | 16.88 | |
| | HILLOCK'S/QUARRIES | 16.59 | |
| | **TOTAL URBANISABLE AREA** | **7568.99** | - |
| | AGRICULTURE | 5706.12 | |
| | WATER BODIES | 338.88 | |
| | FOREST | 1283.70 | |
| | HILLOCK'S/QUARRIES | 61.17 | |
| | **TOTAL** | **14958.86** | |

ಎಂ. ಕರಿಯಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

N W E S

ಸರ್ಕಾರದ ಆದೇಶ ಸಂಖ್ಯೆ : ನಅಇ 151 ಬಿಎಂಆರ್ 2013
ದಿನಾಂಕ : 03.09.2014 ರಲ್ಲಿನ ನಿಬಂಧನೆಗಳಿಗೊಳಪಟ್ಟು
ಮಹಾಯೋಜನೆಗೆ ಅಂತಿಮ ಅನುಮೋದನೆ ನೀಡಲಾಗಿದೆ.

0 100 200 400 600 800 1,000 Meters

Government of Karnataka

## BANGALORE METROPOLITAN REGION DEVELOPMENT AUTHORITY

MEMBER SECRETARY
ANEKAL PLANNING AUTHORITY
ANEKAL

ADDITIONAL DIRECTOR OF
TOWN & COUNTRY PLANNING
BMRDA

METROPOLITAN COMMISSIONER
BMRDA

| Map Title | Proposed Landuse Anekal : AN-1 | Date: |
|---|---|---|
| | | Scale : 1:10,000 |
| | | Map No : 54 |

ದೂರವಾಣಿ : 080-27835122
ಫ್ಯಾಕ್ಸ್ : 080-27836569

# ಆನೇಕಲ್ ಯೋಜನಾ ಪ್ರಾಧಿಕಾರ

"ಅಣ್ಣ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು-560 099.

www.anekal.tpa.gov.in, www.e-vinyasa.kar.nic.in

ಸಂಖ್ಯೆ: ಆಯೋಪ್ರಾ/ಭೂಬ/01/2023-24 ದಿನಾಂಕ: 09 FEB 2024

## ಭೂ ಉಪಯೋಗ ನಿಗಧಿಪಡಿಸಿರುವ ಪತ್ರ

[ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(4) ರನ್ವಯ]

ವಿಷಯ: ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ಇಗ್ಗಲೂರು ಗ್ರಾಮದ ಸ.ನಂ.56ರಲ್ಲಿನ **01ಎಕರೆ 26ಗುಂಟೆ** ವಿಸ್ತೀರ್ಣದ ಪ್ರದೇಶಕ್ಕೆ "ಉದ್ಯಾನವನ" ವಲಯದಿಂದ "ವಸತಿ" ಉದ್ದೇಶಕ್ಕಾಗಿ ಭೂ ಉಪಯೋಗ ನಿಗಧಿಪಡಿಸುವ ಬಗ್ಗೆ.

ಉಲ್ಲೇಖ:
1. ಅರ್ಜಿದಾರರಾದ ಶ್ರೀ ವಿ.ಚಿನ್ನಸ್ವಾಮಿ ರೆಡ್ಡಿ ಹಾಗೂ ಇತರರ ಪರವಾಗಿ ಜಿಪಿಎ ಮತ್ತು ಜಂಟಿ ಅಭಿವೃದ್ಧಿದಾರರಾದ M/s. ADNA Projects LLP ಪರವಾಗಿ ಪಾಲುದಾರರಾದ ಶ್ರೀ ವೇಣುಗೋಪಾಲ್ ಬತಿನೇನಿ ಇವರ ಅರ್ಜಿ ದಿನಾಂಕ:17.05.2023.
2. ಪ್ರಾಧಿಕಾರದಿಂದ ನೀಡಲಾಗಿರುವ ಪತ್ರಿಕಾ ಪ್ರಕಟಣೆಯ ದಿನಾಂಕ:07.10.2023.
3. ದಿನಾಂಕ:18.12.2023ರಂದು ನಡೆದ ಪ್ರಾಧಿಕಾರದ 87ನೇ ಸಭೆಯ ವಿಷಯ ಸಂಖ್ಯೆ:23ರ ನಿರ್ಣಯ.
4. ಪ್ರಾಧಿಕಾರದ ಶುಲ್ಕ ಪಾವತಿಸಲು ತಿಳುವಳಿಕೆ ಪತ್ರ ಸಂಖ್ಯೆ: ಆಯೋಪ್ರಾ/ಭೂ.ಬ/01/2023-24 ದಿನಾಂಕ:23.01.2024.
5. ಭೂ ಉಪಯೋಗ ನಿಗಧಿಪಡಿಸುವ ಸಲುವಾಗಿ ಪ್ರಾಧಿಕಾರಕ್ಕೆ ಅರ್ಜಿದಾರರು ಉತ್ತಮತೆ ಶುಲ್ಕ ರೂ.2,67,500/- ಮತ್ತು ಪರಿಶೀಲನಾ ಶುಲ್ಕ ರೂ.8,000/- ಗಳನ್ನು ಪಾವತಿಸಿರುವ ಚಲನ್ ನಂ.1749 ದಿನಾಂಕ:07.02.2024.

* * * * *

ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69ರನ್ವಯ ಮಹಾಯೋಜನೆ ಅಂತಿಮ ಅನುಮೋದನೆಯಾಗಿರುವುದನ್ನು ರಾಜ್ಯಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಐದು ವರ್ಷಗಳ ಒಳಗಾಗಿ ಮಹಾಯೋಜನೆಯಲ್ಲಿ ಸಾರ್ವಜನಿಕ ಉಪಯೋಗಕ್ಕಾಗಿ ಕಾಯ್ದಿರಿಸಿರುವುದರಲ್ಲಿ ಕಲಂ 12(1)ಬಿ ರಲ್ಲಿನ ಭೂ ಉಪಯೋಗವನ್ನು ಹೊರತುಪಡಿಸಿ, ಉಳಿದ ಭೂ ಉಪಯೋಗ ರದ್ದಾಗಿದೆ ಎಂದು ಭಾವಿಸಲಾಗುತ್ತದೆ. ಸದರಿ ಭೂ ಉಪಯೋಗ ರದ್ದಾಗಿರುವುದರಿಂದ ಅಂತಹ ಜಮೀನುಗಳ ಭೂ ಉಪಯೋಗ ನಿಗಧಿಪಡಿಸಲು ಭೂ ಮಾಲೀಕರು ಕೋರಿದಾಗ ಕಾಯ್ದೆಯಲ್ಲಿನ ಅವಕಾಶದಂತೆ ಕ್ರಮ ತೆಗೆದುಕೊಳ್ಳಬೇಕಾಗಿರುತ್ತದೆ.

ಉಲ್ಲೇಖ(1)ರಲ್ಲಿ ಅರ್ಜಿದಾರರಾದ ಶ್ರೀ ವಿ.ಚಿನ್ನಸ್ವಾಮಿ ರೆಡ್ಡಿ ಹಾಗೂ ಇತರರ ಪರವಾಗಿ ಜಿಪಿಎ ಮತ್ತು ಜಂಟಿ ಅಭಿವೃದ್ಧಿದಾರರಾದ M/s. ADNA Projects LLP ಪರವಾಗಿ ಪಾಲುದಾರರಾದ ಶ್ರೀ ವೇಣುಗೋಪಾಲ್ ಬತಿನೇನಿ ಇವರು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ, **ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ಇಗ್ಗಲೂರು ಗ್ರಾಮದ ಸ.ನಂ.56ರಲ್ಲಿನ 03ಎಕರೆ 20ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ** "ಉದ್ಯಾನವನ" ವಲಯದಿಂದ "ವಸತಿ" ಉದ್ದೇಶಕ್ಕೆ ಭೂ ಉಪಯೋಗ ನಿಗಧಿಪಡಿಸುವಂತೆ ಕೋರಿರುತ್ತಾರೆ.

ಪರಿಶೀಲಿಸಲಾಗಿ, ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆ-2031ರ ಪ್ರಕಾರ ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ಇಗ್ಗಲೂರು ಗ್ರಾಮದ ಸ.ನಂ.56ರಲ್ಲಿನ 03ಎಕರೆ 20ಗುಂಟೆ ಪ್ರದೇಶವು "ಉದ್ಯಾನವನ ಮತ್ತು ಕೆರೆ ಬಫರ್" ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಸದರಿ ಪ್ರದೇಶವು ಕೆರೆಗೆ



B

ದೂರವಾಣಿ : 080-27835122
ಫ್ಯಾಕ್ಸ್ : 080-27836569

# ಆನೇಕಲ್ ಯೋಜನಾ ಪ್ರಾಧಿಕಾರ

"ಅಣ್ಣ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು-560 099.

www.anekal.tpa.gov.in, www.e-vinyasa.kar.nic.in

3. ಪ್ರಸ್ತಾವಿತ ಜಮೀನಿನಲ್ಲಿ ಯಾವುದೇ ವಸತಿ ಅಭಿವೃದ್ಧಿ / ಯೋಜನೆಗಾಗಿ ಸಂಬಂಧಿಸಿದ ಇಲಾಖೆ / ಸಕ್ಷಮ ಪ್ರಾಧಿಕಾರಗಳಿಂದ ಮತ್ತು ಈ ಪ್ರಾಧಿಕಾರದಿಂದ ಅಗತ್ಯ ಅನುಮೋದನೆಗಳನ್ನು ಪಡೆಯತಕ್ಕದ್ದು.
4. ಸದರಿ ಜಮೀನು ಈಗಾಗಲೇ ಭೂ ಸ್ವಾಧೀನ ಪ್ರಕ್ರಿಯೆಗೆ ಒಳಪಟ್ಟಿದ್ದಲ್ಲಿ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.
5. ಸದರಿ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ನ್ಯಾಯಾಲಯದಲ್ಲಿ ಸಿವಿಲ್ ವ್ಯಾಜ್ಯ / ತಂಟೆ ತಕರಾರುಗಳಿದ್ದಲ್ಲಿ ಈ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.
6. ಭೂ ಉಪಯೋಗ ಬದಲಾವಣೆಯು ಆಸ್ತಿಯ ಹಕ್ಕಿನ ಪ್ರತಿಪಾದನೆಗೆ ದಾಖಲೆಯಾಗುವುದಿಲ್ಲ ಮತ್ತು ಭೂ ಸುಧಾರಣಾ ಕಾಯ್ದೆಯಡಿ ಹಾಗೂ ಭೂ ಕಂದಾಯ ಕಾಯ್ದೆ, 1964 ರ ಕಲಂ 136(3) ರ ಅಡಿಯಲ್ಲಾಗಲೀ ಅಥವಾ ನ್ಯಾಯಾಲಯದಲ್ಲಾಗಲೀ ಪ್ರಕರಣಗಳು ಬಾಕಿ ಇದ್ದಲ್ಲಿ ಸದರಿ ನ್ಯಾಯಾಲಯದ ಅಂತಿಮ ಆದೇಶಕ್ಕೆ ಅರ್ಜಿದಾರರೇ ಬದ್ಧರಾಗಿರತಕ್ಕದ್ದು ಹಾಗೂ ಭೂ ಉಪಯೋಗ ನಿಗಧಿಪಡಿಸುವ ಸಂಬಂಧ ಪ್ರಾಧಿಕಾರಕ್ಕೆ ಪಾವತಿಸಿರುವ ಶುಲ್ಕಗಳನ್ನು ವಾಪಸ್ಸು ನೀಡಲಾಗುವುದಿಲ್ಲ.
7. ತಪ್ಪು ಮಾಹಿತಿಯನ್ನು ಪ್ರಾಧಿಕಾರಕ್ಕೆ ಸಲ್ಲಿಸಿ, ಭೂ ಉಪಯೋಗ ನಿಗಧಿಗೊಳಿಸಲಾಗಿರುವ ಆದೇಶವನ್ನು ಪಡೆದಿದ್ದಲ್ಲಿ ಅಂತಹ ಆದೇಶಗಳು ತಂತಾನಾಗಿಯೇ ರದ್ದಾಗುತ್ತದೆ.
8. ಪ್ರಸ್ತಾವಿತ ಜಮೀನಿನಲ್ಲಿ ಕೆರೆ, ನಾಲಾ, ಹಳ್ಳ ಮತ್ತು ಹೆಚ್ಚುವರಿ ವಿದ್ಯುತ್ ವಾಹಕ ತಂತಿಗಳು ಹಾದು ಹೋಗಿದ್ದಲ್ಲಿ ನಿಯಮಾನುಸಾರ ನಿಗಧಿಪಡಿಸಲಾಗಿರುವ ಸೂಕ್ತ ಬಫರ್‌ನ್ನು ಬಿಟ್ಟು ಪ್ರಾಧಿಕಾರದ ಅನುಮೋದನೆಯನ್ನು ಪಡೆದುಕೊಳ್ಳತಕ್ಕದ್ದು.
9. ಮಹಾಯೋಜನೆಯಲ್ಲಿ ಪ್ರಸ್ತಾಪಿಸಿರುವ ರಸ್ತೆಗಳನ್ನು ಹಾಗೂ ಕಂದಾಯ ದಾಖಲೆಯಲ್ಲಿರುವ ರಸ್ತೆಗಳನ್ನು ಯಥಾವತ್ತಾಗಿ ಕಾಯ್ದಿರಿಸಿ ಅಳವಡಿಸಿಕೊಳ್ಳತಕ್ಕದ್ದು.
10. ಅರ್ಜಿದಾರರು / ತಪ್ಪು ಮಾಹಿತಿ / ದಾಖಲೆಗಳನ್ನು ಸಲ್ಲಿಸಿ ಅನುಮೋದನೆ ಪಡೆದುಕೊಂಡಲ್ಲಿ ಈ ಆದೇಶವು ಸ್ವಯಂ ಚಾಲಿತವಾಗಿ ರದ್ದಾಗುತ್ತದೆ.
11. ಆನೇಕಲ್ ಯೋಜನಾ ಪ್ರಾಧಿಕಾರವು ಕಾಲಕಾಲಕ್ಕೆ ವಿಧಿಸುವ ಇತರೆ ನಿಬಂಧನೆಗಳನ್ನು ಪಾಲಿಸತಕ್ಕದ್ದು.

09/02/2024

ಸದಸ್ಯ-ಕಾರ್ಯದರ್ಶಿ ಹಾಗೂ ನಗರ ಮತ್ತು
ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಆನೇಕಲ್ ಯೋಜನಾ ಪ್ರಾಧಿಕಾರ,
ಆನೇಕಲ್.

ಇವರಿಗೆ,

ಶ್ರೀ ವಿ.ಚಿನ್ನಸ್ವಾಮಿ ರೆಡ್ಡಿ ಹಾಗೂ ಇತರರ ಪರವಾಗಿಜಿಪಿಎ ಮತ್ತು
ಜಂಟಿ ಅಭಿವೃದ್ಧಿದಾರರಾದ M/s. ADNA Projects LLP ಪರವಾಗಿ
ಪಾಲುದಾರರಾದ ಶ್ರೀ ವೇಣುಗೋಪಾಲ್ ಬತಿನೇನಿ,
ನಂ.349, 15ನೇ ಕ್ರಾಸ್, 17ನೇ ಮೈನ್, 4ನೇ ಸೆಕ್ಟರ್,
ಹೆಚ್.ಎಸ್.ಆರ್ ಲೇಔಟ್, ಬೆಂಗಳೂರು–560 102.

ಹೊಂದಿಕೊಂಡಿದ್ದು, ನಿಯಮಾನುಸಾರ ಅಗತ್ಯ ಬಫರ್ ಕಾಯ್ದಿರಿಸಬೇಕಾಗಿರುತ್ತದೆ. ಹಾಗಾಗಿ, ಇಗ್ಗಲೂರು ಗ್ರಾಮದ ಸ.ನಂ.56ರಲ್ಲಿನ 03ಎಕರೆ 20ಗುಂಟೆ ಪೈಕಿ 01ಎಕರೆ 34ಗುಂಟೆ ಬಫರ್ ಪ್ರದೇಶವನ್ನು ಹೊರತುಪಡಿಸಿ, ಉಳಿಕೆ ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ಇಗ್ಗಲೂರು ಗ್ರಾಮದ ಸ.ನಂ.56ರಲ್ಲಿನ 01ಎಕರೆ 26ಗುಂಟೆ ವಿಸ್ತೀರ್ಣದ ಪ್ರದೇಶವನ್ನು ಮಾತ್ರ ಭೂ ಉಪಯೋಗ ಬದಲಾವಣೆಗೆ ಪರಿಗಣಿಸಬಹುದಾಗಿರುತ್ತದೆ.

ಉಲ್ಲೇಖ(2)ರಲ್ಲಿ ಪ್ರಾಧಿಕಾರದಿಂದ ದಿನಾಂಕ:07.10.2023ರಂದು ಕನ್ನಡ ದಿನಪತ್ರಿಕೆಗಳಾದ **"ವಿಜಯ ಕರ್ನಾಟಕ"** ಮತ್ತು **"ಸಂಜೆ ಮುಗಿಲು"** ದಿನಪತ್ರಿಕೆಗಳಲ್ಲಿ ಪತ್ರಿಕಾ ಪ್ರಕಟಣೆ ನೀಡಲಾಗಿರುತ್ತದೆ. ನಿಗಧಿತ ಅವಧಿಯಲ್ಲಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆ ಸ್ವೀಕೃತವಾಗಿರುವುದಿಲ್ಲ.

ಉಲ್ಲೇಖ(3)ರಂತೆ ದಿನಾಂಕ:18.12.2023ರಂದು ನಡೆದ ಪ್ರಾಧಿಕಾರದ 87ನೇ ಸಭೆಯ ವಿಷಯ ಸಂಖ್ಯೆ:23ರಲ್ಲಿ ಮಂಡಿಸಲಾಗಿ, "ಪ್ರಸ್ತಾವನೆ ಬಗ್ಗೆ ನೀಡಿರುವ ಪ್ರಸ್ತಾವನೆ ಬಗ್ಗೆ ನೀಡಿರುವ ಪತ್ರಿಕಾ ಪ್ರಕಟಣೆಗೆ ನಿಗಧಿತ ಕಾಲಾವಧಿಯಲ್ಲಿ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಯು ಪ್ರಾಧಿಕಾರಕ್ಕೆ ಸ್ವೀಕೃತವಾಗಿರುವುದಿಲ್ಲ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69(2)ರಂತೆ ಪ್ರಶ್ನಿತ ಜಮೀನಿನ ಭೂ ಉಪಯೋಗ ರದ್ದಾಗಿರುವ ಕಾರಣ ಹೊಸ ಭೂ ಉಪಯೋಗ ನಿಗಧಿಪಡಿಸಬೇಕಾಗಿರುವುದರಿಂದ ಹಾಗೂ ಪ್ರಶ್ನಿತ ಜಮೀನು ವಸತಿ ಬೆಳವಣಿಗೆಗಳಿಗೆ ಹೊಂದಿಕೊಂಡಿರುವುದರಿಂದ ಭೂ ಉಪಯೋಗ ನಿಗಧಿಪಡಿಸುವ ಸಂದರ್ಭದಲ್ಲಿ ಅವಶ್ಯ ನಿಬಂಧನೆಗಳನ್ನು ವಿಧಿಸಿ, ಅಗತ್ಯ ದಾಖಲೆಗಳನ್ನು ಪಡೆದು, ಅರ್ಜಿದಾರರಿಂದ ಅಗತ್ಯ ಶುಲ್ಕಗಳನ್ನು ಪಾವತಿಸಿಕೊಂಡು ನಂತರ, ಮಹಾಯೋಜನೆ ಪರಿಷ್ಕರಣೆ ಸಮಯದಲ್ಲಿ ಪ್ರಶ್ನಿತ ಜಮೀನನ್ನು ಮಹಾಯೋಜನೆ ಪ್ರಸ್ತಾವನೆಯಲ್ಲಿ ಸಮಗ್ರವಾಗಿ ಹಾಗೂ ಯೋಜನಾ ಬದ್ಧವಾಗಿ ಅಳವಡಿಸಿಕೊಳ್ಳಲು ತೀರ್ಮಾನಿಸಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69(4)ರನ್ವಯ ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ಇಗ್ಗಲೂರು ಗ್ರಾಮದ ಸ.ನಂ.56ರಲ್ಲಿನ 03ಎಕರೆ 20ಗುಂಟೆ ವಿಸ್ತೀರ್ಣದ ಪೈಕಿ 01ಎಕರೆ 34ಗುಂಟೆ ವಿಸ್ತೀರ್ಣದ ಬಫರ್ ಪ್ರದೇಶವನ್ನು ಹೊರತುಪಡಿಸಿ, ಉಳಿಕೆ 01ಎಕರೆ 26ಗುಂಟೆ ವಿಸ್ತೀರ್ಣದ ಜಮೀನನ್ನು "ಉದ್ಯಾನವನ" ವಲಯದಿಂದ "ವಸತಿ" ವಲಯಕ್ಕೆ ಭೂ ಉಪಯೋಗ ನಿಗಧಿಪಡಿಸಲು ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ."

ಪ್ರಾಧಿಕಾರದ ಸಭೆಯ ತೀರ್ಮಾನದಂತೆ, ಉಲ್ಲೇಖ(4)ರಲ್ಲಿ ನಿಗಧಿತ ಶುಲ್ಕಗಳನ್ನು ಪಾವತಿಸಲು ತಿಳಿಸಲಾಗಿದ್ದು, ಅದರಂತೆ, ಅರ್ಜಿದಾರರು ಉಲ್ಲೇಖ(5)ರಲ್ಲಿ ಭೂ ಉಪಯೋಗ ನಿಗಧಿಪಡಿಸುವ ಸಲುವಾಗಿ ಈ ಪ್ರಾಧಿಕಾರಕ್ಕೆ ನಿಗಧಿತ ಶುಲ್ಕಗಳನ್ನು ಪಾವತಿಸಿರುವುದರಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 69ರಲ್ಲಿನ ಅವಕಾಶಗಳನ್ವಯ ಅರ್ಜಿದಾರರ ಕೋರಿಕೆಯನ್ನು ಪರಿಗಣಿಸಿ, **ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ಇಗ್ಗಲೂರು ಗ್ರಾಮದ ಸ.ನಂ.56ರಲ್ಲಿನ 01ಎಕರೆ 26ಗುಂಟೆ** ವಿಸ್ತೀರ್ಣದ ಪ್ರದೇಶಕ್ಕೆ "ಉದ್ಯಾನವನ" **ವಲಯದಿಂದ "ವಸತಿ"** ಉದ್ದೇಶಕ್ಕಾಗಿ ಭೂ ಉಪಯೋಗವನ್ನು ನಿಗಧಿಪಡಿಸಿ ಈ ಕೆಳಕಂಡ ನಿಬಂಧನೆಗಳಿಗೊಳಪಟ್ಟು ನಿಗಧಿಪಡಿಸಲಾಗಿದೆ.

## ನಿಬಂಧನೆಗಳು

1. ಅರ್ಜಿದಾರರು ಪ್ರಸ್ತಾವಿತ ಜಮೀನಿನಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಮುನ್ನ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 17(2) ರಡಿಯಲ್ಲಿ ಪ್ರಾಧಿಕಾರದ ವಲಯ ನಿಯಮಾವಳಿಗಳನ್ವಯ ಕಡ್ಡಾಯವಾಗಿ ಆನೇಕಲ್ ಯೋಜನಾ ಪ್ರಾಧಿಕಾರದಿಂದ ಕಛೇರಿಯಿಂದ ಅನುಮೋದನೆಯನ್ನು ಪಡೆಯತಕ್ಕದ್ದು.
2. ಪ್ರಸ್ತಾವಿತ ಜಮೀನನ್ನು ಯಾವ ಉದ್ದೇಶಕ್ಕಾಗಿ ಭೂ ಉಪಯೋಗ ನಿಗಧಿಪಡಿಸಲಾಗಿದೆಯೋ ಅದೇ ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸತಕ್ಕದ್ದು.